# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 04.09.2021 ರಂದು ಸಂಜೆ 03:00 ಘಂಟೆಗೆ Ward DETER Commitee ಅನ್ನು 189-ಹೊಂಗಸಂದ್ರ ವಾರ್ಡಿನ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು :**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಸಹಾಯಕ ಅಭಿಯಂತರರು & ಕಾರ್ಯದರ್ಶಿ,**

**ಸದ್ಯಸರುಗಳು,**

**ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ. ಆರ್ | ಅಧ್ಯಕ್ಷರು/ನೋಡಲ್ ಅಧಿಕಾರಿಗಳು<br>ಕಾರ್ಯಪಾಲಕ ಅಭಿಯಂತರರು<br>ಬೃಹತ್ ನೀರುಗಾಲುವೆ ವಿಭಾಗ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ಸಂ. 189 |
| 3 | ಶ್ರೀ ನಾಗಭೂಷಣ್. ಆರ್ | ಸದಸ್ಯರು |
| 4 | ಶ್ರೀ ಕೋದಂಡ ರಾಮ ರೆಡ್ಡಿ | ಸದಸ್ಯರು |
| 5 | ಶ್ರೀ ವೆಂಕಟೇಶಯ್ಯ | ಹಿರಿಯ ಆರೋಗ್ಯ ಪರಿವೀಕ್ಷಕರು, ಹೊಂಗಸಂದ್ರ |
| 6 | ಶ್ರೀ ನೂರ ಪರೀಫ್ | ಸಹಾಯಕ ಆರಕ್ಷಕ ನಿರೀಕ್ಷಕರು |
| 7 | ಶ್ರೀ ನಾರಾಯಣ ಸ್ವಾಮಿ. ಹೆಚ್ | ಸಹಾಯಕ ಅಭಿಯಂತರರು,<br>ಬೆಸ್ಕಾಂ ಎಸ್-19 |
| 8 | ಶ್ರೀಮತಿ ಡಾ|| ಲೀನಾ ವಿ.ಎಲ್ | ಕೋವಿಡ್ ವೈದ್ಯಾಧಿಕಾರಿಗಳು |
| 9 | ಶ್ರೀ ವಿನೋದ್ ಕುಮಾರ್ ಟಿ | ಕಿರಿಯ ಆರೋಗ್ಯ ಪರಿವೀಕ್ಷಕರು, ಹೊಂಗಸಂದ್ರ-189 |
| 10 | ಶ್ರೀ ಸ್ವಾಮಿ.ಡಿ | ಕಿರಿಯ ಅಭಿಯಂತರರು, ಎಸ್-19, ಬೆಸ್ಕಾಂ |
| 11 | ಶ್ರೀ ರಾಮಕೃಷ್ಣ | ಕಂದಾಯ ನಿರೀಕ್ಷಕರು, ಹೊಂಗಸಂದ್ರ-189 |
| 12 | ವೆಂಕಟೇಶ್ | ವಾಟರ್ ಮೆನ್ ಬಿ.ಡಬ್ಲ್ಯೂ.ಎಸ್.ಎಸ್.ಬಿ |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿರುತ್ತದೆ. ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

- **ಆರೋಗ್ಯ ಇಲಾಖೆ (ಕೋವಿಡ್-19):**

1. ಶ್ರೀಮತಿ ಡಾ|| ಲೀನಾ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ದಿನಾಂಕ: 13.08.2021 ರಿಂದ 04.09.2021 ರವರೆಗೆ

   18 ರಿಂದ 44 ಮತ್ತು 45 ವರ್ಷ ಮೇಲ್ಪಟ್ಟವರಿಗೆ

   Covishield – ಒಟ್ಟು 6326 1st and 2nd dose

   Covaxine- ಒಟ್ಟು 782 1st and 2nd dose

ಲಸಿಕೆಯನ್ನು ನೀಡಲಾಗಿದೆ ಎಂದು ಶ್ರೀಮತಿ ಡಾ|| ಲೀನಾ ವೈದ್ಯರು ಸಭೆಗೆ ತಿಳಿಸಿದರು.

ಮು.ತಿ.ನೋ

Scanned with

2. ಹೊಂಗಸಂದ್ರ ವಾರ್ಡ ವ್ಯಾಪ್ತಿಯಲ್ಲಿ ಕೋವಿಡ್-19 ಪರೀಕ್ಷೆಗೆ ಕೊಟ್ಟಿರುವ ಟಾರ್ಗೆಟ್ ಪ್ರತಿದಿನ 350 ಪರೀಕ್ಷೆಗಳನ್ನು ನೇರವೇರಿಸಲಾಗುತ್ತಿದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಡಾ॥ ಶ್ರೀಮತಿ ಲೀನಾ ರವರು ಸಭೆಗೆ ತಿಳಿಸಿದ್ದರು.

3. ಹೊಂಗಸಂದ್ರ ವಾರ್ಡ ವ್ಯಾಪ್ತಿಯಲ್ಲಿ ಪ್ರತಿ ಬುಧವಾರ ಮೇಗಾ ಲಸಿಕಾ ಮೇಳವನ್ನು ಆಯೋಜಿಸಿ ಲಸಿಕೆ ನೀಡಲಾಗುತ್ತಿದ್ದು, ಈಗಾಗಲೇ ಇಲ್ಲಿಯವರೆಗೆ 3 ಕಾರ್ಯಕ್ರಮವನ್ನು ಯಶಸ್ವಿಯಾಗಿ ಎಲ್ಲಾ ಗಾರ್ಮೆಂಟ್ ನೌಕರರಿಗೆ, ಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಕಟ್ಟಡದ ಕೂಲಿ ಕಾರ್ಮಿಕರಿಗೆ ಲಸಿಕೆ ನೀಡಲಾಗಿರುತ್ತದೆ ಎಂದು ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಡಾ॥ ಶ್ರೀಮತಿ ಲೀನಾ ರವರು ಸಭೆಗೆ ತಿಳಿಸಿದ್ದರು. ಈ ಬಗ್ಗೆ ಕಟ್ಟಡ ಕೂಲಿ ಕಾರ್ಮಿಕರು ಕೋವಿಡ್-19 ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಮತ್ತು ಅನ್‌ಲಾಕ್ ಆಗಿರುವುದರಿಂದ ವಿವಿಧ ಊರುಗಳಿಂದ ವಲಸೆ ಬಂದಿದ್ದು, ಅವರನ್ನು ಪತ್ತೆ ಹಚ್ಚಿ ಲಸಿಕೆ ನೀಡಲು ಸದಸ್ಯರಾದ ಕೋಡದಂಡರಾಮ ರೆಡ್ಡಿ ಮತ್ತು ನಾಗಭೂಷಣ ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಕ್ರಮವಹಿಸುವುದಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಡಾ॥ ಶ್ರೀಮತಿ ಲೀನಾ ರವರು ಸಭೆಗೆ ತಿಳಿಸಿದ್ದರು.

4. Covishield to Covaxine, Covaxine to Covishield ಲಸಿಕೆಯನ್ನು ನೀಡಲು ಪತ್ರಿಕೆ ಪ್ರಕಟಣೆ ಬಂದಿರುವ ಬಗ್ಗೆ ಸದಸ್ಯರಾದ ಕೋಡದಂಡರಾಮ ರೆಡ್ಡಿ ಮತ್ತು ನಾಗಭೂಷಣ ರವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಪರಿಣಿತರಿಂದ ಸಂಶೋಧನೆ ನಡೆಯುತ್ತಿದ್ದು, ಯಾವುದೇ ಅಧಿಕೃತ ಮಾಹಿತಿಯನ್ನು ಸರ್ಕಾರದಿಂದ ಘೋಷಣೆ ಮಾಡಿರುವುದಿಲ್ಲ.

5. ಡಾ॥ ಬಿ.ಆರ್ ಅಂಬೇಡ್ಕರ್ ಭವನದಲ್ಲಿ ಕೋವಿಡ್-19 ಪರೀಕ್ಷೆ ಮತ್ತು ಲಸಿಕೆ ನಡೆಯುತ್ತಿದ್ದು, ಲಸಿಕೆಗಾಗಿ ಪ್ರತ್ಯೇಕ ಸರ್ಕಾರಿ ಶಾಲೆಯ ಕಟ್ಟಡದಲ್ಲಿ ತಾತ್ಕಾಲಿಕವಾಗಿ 1ನೇ ಮತ್ತು 3ನೇ ತರಗತಿಯ ಕೊಠಡಿಗಳನ್ನು ಉಪಯೋಗಿಸಕೊಳ್ಳಬಹುದಾಗಿದೆ. ತದನಂತರ ಪ್ರತ್ಯೇಕ ಜಾಗವನ್ನು ಮೀಸಲಿರಿಸಿ ಲಸಿಕೆ ನೀಡಲು ವಾರ್ಡ್ ಸದಸ್ಯರಾದ ಕೋಡದಂಡರಾಮ ರೆಡ್ಡಿ ಮತ್ತು ನಾಗಭೂಷಣ ರವರು ವಾರ್ಡ್ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಡಾ॥ ಶ್ರೀಮತಿ ಲೀನಾ ರವರು ಮೇಲಾಧಿಕಾರಿಗಳ ಗಮನಕ್ಕೆ ತಂದು ಕ್ರಮ ವಹಿಸಲಾಗುವುದೆಂದು ಸಭೆಗೆ ತಿಳಿಸಿದ್ದರು.

6. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ 19 ಪರೀಕ್ಷೆ ಮತ್ತು ಲಸಿಕೆ ನೀಡಲು ಸಿಬ್ಬಂದಿ ಕೊರತೆ ಇರುವುದರಿಂದ ವಾರ್ಡ್‌ಗೆ ಒಬ್ಬ ಬಿ.ಯು ಮತ್ತು ನರ್ಸ್ ಸಿಬ್ಬಂದಿ ವರ್ಗದವರನ್ನು ನೇಮಿಸಬೇಕೆಂದು ವೈದ್ಯರಾದ ಡಾ॥ ಶ್ರೀಮತಿ ಲೀಲಾ ರವರು ವಾರ್ಡ್ ಸಭೆ ಗಮನಕ್ಕೆ ತಂದಿರುತ್ತಾರೆ.

- <u>ಬಿ.ಡಬ್ಲ್ಯೂ.ಎಸ್.ಎಸ್.ಬಿ.</u>

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಬೇಗೂರು ಮುಖ್ಯ ರಸ್ತೆಯ ಐಶ್ವರ್ಯ ಬಾರ್‌ರಿಂದ ಬೊಮ್ಮನಹಳ್ಳಿ ವೃತ್ತದ ವರೆಗಿನ ಮಾರ್ಗದಲ್ಲಿ ಒಳಚರಂಡಿ ಪೈಪ್‌ಲೈನ್ ದುರಸ್ಥಿಗೆ ಬಂದಿದ್ದು, ಆದ್ದರಿಂದ ದುರಸ್ಥಿಪಡಿಸುವಂತೆ ಇಲ್ಲವಾದರೆ ಹೊಸ ಮಾರ್ಗದ ಕಾಮಗಾರಿಯನ್ನು ಕೈಗೊಳ್ಳಲು ಕೋಡದಂಡರಾಮ ರೆಡ್ಡಿ ರವರು ವಾರ್ಡ್ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ವಾರ್ಡ್ ಸಹಾಯಕ ಕಾರ್ಯಪಾಲಕ ಅಭಿಯಂತರರ ಪರವಾಗಿ ಸಭೆಯಲ್ಲಿ ಹಾಜರಿದ್ದ ವಾಟರ್ ವಾಟರ್ ಮೆನ್ ವೆಂಕಟೇಶ್ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು

- <u>ಬೆಸ್ಕಾಂ</u>

1. ವಾರ್ಡ್ ವ್ಯಾಪ್ತಿಯ ಎಸ್-8 ಉಪವಿಭಾಗದಿಂದ ವಿವೇಕ ನಗರ 2ನೇ, 3ನೇ ಮತ್ತು 4ನೇ ಅಡ್ಡ ರಸ್ತೆಗಳಲ್ಲಿರುವ ವಿದ್ಯುತ್ ಕಂಬಗಳನ್ನು ಬೀಳುವ ಸ್ಥಿತಿಗೆ ಬಂದಿದ್ದು, ಬದಲಾಯಿಸುವಂತೆ ನಾಗಭೂಷಣ ರವರು ವಾರ್ಡ್ ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ವಾರ್ಡ್ ಸಮಿತಿ ಸಭೆಗೆ ಅನೇಕಬಾರಿ ಸಭೆಯಲ್ಲಿ ಸೂಚನೆ ನೀಡಿದ್ದರು ಸಹ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಆಗಲಿ ಅಥವ, ಸಹಾಯಕ ಅಭಿಯಂತರರು ಸಭೆಗೆ ಹಾಜರಾಗಿರುವುದಿಲ್ಲ ಹಾಗೂ ಇಲ್ಲಿವಯವರೆಗೂ ಕ್ರಮವಹಿಸುತ್ತೇನೆ ಎಂದು ಸಭೆಯಲ್ಲಿ ತಿಳಿಸಿ ಸಭೆಯಲ್ಲಿ ತಿಳಿಸಿ ಕಾಮಗಾರಿ ಮಾಡಿರುವುದಿಲ್ಲ, ಇದು ಅಧಿಕಾರಿಗಳ ಅಥವ ಸಿಬ್ಬಂದಿರವರ ಬೇಜವಾಬ್ದಾರಿ ಆಗಿರುತ್ತದೆ ಎಂದು ಸದಸ್ಯರು ಆಕ್ಷೇಪಣೆ ನೀಡುತ್ತಾರೆ ಮಾಡಿರುತ್ತಾರೆ ಈ ಬಗ್ಗೆ ಅಧ್ಯಕ್ಷರು/ನೋಡಲ್ ಅಧಿಕಾರಿ ರವರು ನೋಟಿಸ್ ಜಾರಿ ಮಾಡುವಂತೆ ಸೂಚಿಸಿರುತ್ತಾರೆ.

ಪು.ತಿ.ನೋ

Scanned with

- **ವಿದ್ಯುತ್ (ಬೀದಿ ದೀಪ)**

1. ವಾರ್ಡ್ ಸಮಿತಿ ಸಭೆಗೆ ಅನೇಕ ಬಾರಿ ಸಭಾ ಸೂಚನಾ ಪತ್ರವನ್ನು ನೀಡಿದ್ದರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಆಗಲಿ ಅಥವ ಸಹಾಯಕ ಅಭಿಯಂತರರು ಸಭೆಗೆ ಹಾಜರಾಗಿರುವುದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು ಆಕ್ಷೇಪಣೆ ಮಾಡಿರುತ್ತಾರೆ. ಈ ಬಗ್ಗೆ ಅಧ್ಯಕ್ಷರು / ನೋಡಲ್ ಅಧಿಕಾರಿ ರವರು ನೋಟಿಸ್ ಜಾರಿ ಮಾಡುವಂತೆ ಸೂಚಿಸಿರುತ್ತಾರೆ.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

04/09/2021

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

04/09/21

ಅಧ್ಯಕ್ಷರು / ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with